# ಜಪಾನಿನ ಹೆಮ್ಮೆ ನಯೊಮಿ

ಈ ವರ್ಷದ (2018) ಯುಎಸ್ ಓಪನ್ ಟೆನಿಸ್, ಮಹಿಳೆಯರ ಫೈನಲ್ ಹೊಸ ಇತಿಹಾಸವೊಂದನ್ನು ಬರೆದಿದೆ. 20ರ ಹರೆಯದ ಜಪಾನಿನ ಎಳೆಯ ಹುಡುಗಿ ನಯೊಮಿ ಒಸಾಕ, 36 ಹರೆಯದ ದೈತ್ಯ ಟೆನಿಸ್ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಳನ್ನು ನೇರ ಎರಡು ಸೆಟ್‌ಗಳಲ್ಲಿ ಬಗ್ಗುಬಡಿದು ಗೆದ್ದ ಪಂದ್ಯವದು. ಇದು ನಯೊಮಿ ಗೆದ್ದ ಮೊತ್ತಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ. ಫೈನಲ್ ಪ್ರವೇಶಿಸಿದ್ದ ಸೆರೆನಾ ಈವರೆಗೆ 23 ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳನ್ನು ಗೆದ್ದು 'ವಿಶ್ವದ ನಂಬರ್ ಒನ್' ಆಟಗಾರ್ತಿಯಾಗಿದ್ದವಳು. ಯಾವ ಲೆಕ್ಕದಿಂದ ನೋಡಿದರೂ ಸೆರೆನಾಳ ಅನುಭವಕ್ಕೆ ನಯೊಮಿ ಸರಿಸಾಟಿ ಆಗಿರಲಿಲ್ಲ. ಅದೂ ಅಲ್ಲದೆ ಪೆವಿಲಿಯನ್ ತುಂಬ ಸೇರಿದ್ದ ಪ್ರೇಕ್ಷಕರಲ್ಲಿ ಶೇಕಡಾ 90ರಷ್ಟು ಮಂದಿ ಸೆರೆನಾ ಗೆಲ್ಲುವುದನ್ನು ನೋಡಲೆಂದೇ ಬಂದಂತಿದ್ದರು. ಪಂದ್ಯದುದ್ದಕ್ಕೂ ಸೆರೆನಾ ಪರವಾಗಿ ಚಪ್ಪಾಳೆ ಬೀಳುತ್ತಿತ್ತು. ನಯೊಮಿ ಪಾಯಿಂಟ್ ಗೆದ್ದಾಗ 'ಬೂ' ಎನ್ನುವ ಹೀಗಳಿಕೆ ಕೇಳಿಸುತ್ತಿತ್ತು. ಆದರೆ ಏಕಾಗ್ರಚಿತ್ತಳಾಗಿ ಆಡಿದ ನಯೊಮಿ ಕೇವಲ 79 ನಿಮಿಷಗಳಲ್ಲಿ ಎರಡು ನೇರ ಸೆಟ್‌ಗಳಲ್ಲಿ ಎದುರಾಳಿಯನ್ನು ನೆಲಕ್ಕುರುಳಿಸಿದಳು. ವಾತಾವರಣ ಎಷ್ಟೊಂದು ಉದ್ರಿಕ್ತವಾಗಿತ್ತೆಂದರೆ, ಸಿಟ್ಟಿಗೆದ್ದ ಸೆರೆನಾ ಅಂಪೈರ್ ಜತೆಗೆ ವಾಗ್ವಾದಕ್ಕಿಳಿದಳು, ರ್‍ಯಾಕೆಟ್‌ಅನ್ನು ನೆಲಕ್ಕೆಸೆದು ತುಂಡು ಮಾಡಿದಳು. ಪಂದ್ಯದ ಕೊನೆಯಲ್ಲಿ ನಯೊಮಿ ಸ್ವತಃ 'ನಿಮ್ಮ ಫೇವರೆಟ್ ಆಟಗಾರ್ತಿಯನ್ನು ಸೋಲಿಸಿದ್ದಕ್ಕೆ ಕ್ಷಮಿಸಿ' ಎಂದು ಪ್ರೇಕ್ಷಕರಲ್ಲಿ ಕೇಳಿಕೊಂಡಳು. ಸೆರೆನಾ ಕೂಡಾ ಕೊನೆಗೆ ಹಸಿಗಣ್ಣಿನಿಂದ 'ಆಕೆ ಅತ್ಯುತ್ತಮವಾಗಿ ಆಡಿ ಗೆದ್ದಿದ್ದಾಳೆ, ಅವಳನ್ನು ಹಂಗಿಸಬೇಡಿ' ಎಂದಳು!

ಇದೊಂದು ಐತಿಹಾಸಿಕ ವಿಜಯ. ಜಪಾನಿನ ಯಾರೊಬ್ಬರೂ ಈವರೆಗೆ ಗ್ರ್ಯಾನ್‌ಸ್ಲಾಂ ಟೆನಿಸ್ ಪ್ರಶಸ್ತಿಯನ್ನು ಗೆದ್ದಿಲ್ಲ. ನಯೊಮಿಯ ಸಾಧನೆ ಜಪಾನಿನ ಕ್ರೀಡಾಭಿಮಾನಿಗಳನ್ನು ಹುಚ್ಚೆಬ್ಬಿಸಿದೆ. ಸೆರೆನಾ ತನ್ನ ವೃತ್ತಿಜೀವನದ ಮೊದಲ ಗ್ರ್ಯಾನ್‌ಸ್ಲಾಮ್ ಗೆದ್ದಾಗ ನಯೊಮಿ ಇನ್ನೂ ಎರಡೂವರೆ ವರ್ಷದ ಮಗು! ಬಾಲ್ಯದಿಂದ ಸೆರೆನಾಳ ಆಟವನ್ನು ನೋಡುತ್ತಲೇ ಬೆಳೆದವಳು ನಯೊಮಿ. ಈ ಜಯ ಕ್ರೀಡೆಯ ಚಂಚಲತೆ ಮತ್ತು ಅನೂಹ್ಯತೆಗೆ ಸಾಕ್ಷಿ.

ನಯೊಮಿಯ ಸಂದರ್ಶನಕ್ಕೆ ಎಲ್ಲಿಲ್ಲದ ಬೇಡಿಕೆ. 'ದಿ ಎಲಿನ್ ಶೋ'ನಲ್ಲಿ ಖ್ಯಾತ ಸಂದರ್ಶಕಿ ಎಲಿನ್ ಕೇಳಿದ ಪ್ರಶ್ನೆಗಳಿಗೆ ನಯೊಮಿ ನೀಡಿದ ಉತ್ತರಗಳು ಆಕೆ ಎಷ್ಟೊಂದು ವಿನಯವಂತೆ ಮತ್ತು ಮುಗ್ಧೆ ಎನ್ನುವುದನ್ನು ಎತ್ತಿ ತೋರಿಸಿವೆ. 'ಟ್ರೋಫಿ ಜೊತೆಗೆ 38 ಲಕ್ಷ ಅಮೆರಿಕನ್ ಡಾಲರ್ ಬಹುಮಾನ ಸಿಕ್ಕಿದೆ. ಏನು ಮಾಡುತ್ತೀ? ಕಾರು ತಗೋತೀಯಾ? ಮನೆ ಖರೀದಿಸುತ್ತೀಯಾ?' ಎಂಬ ಪ್ರಶ್ನೆಗೆ ನಯೊಮಿ ಉತ್ತರಿಸಿದ್ದು– 'ಹೌದು ನನ್ನ ಬಳಿ ಕಾರಿಲ್ಲ, ಮನೆಯಿಲ್ಲ. ಆದರೆ ನನ್ನ ಬಳಿ ಒಳ್ಳೆಯ ಟಿವಿ ಕೂಡಾ ಇಲ್ಲ. ಮೊದಲು ದೊಡ್ಡದೊಂದು ಟಿವಿ ತಗೋಬೇಕು!' ನಿಜಕ್ಕೂ ಮುಗ್ಧ ಹುಡುಗಿ! ತಕ್ಷಣ ಎಲಿನ್, ದೊಡ್ಡದೊಂದು ಟಿವಿ ತರಿಸಿ ಸ್ಟುಡಿಯೋದಲ್ಲೇ ಆಕೆಗೆ ಕಾಣಿಕೆ ಕೊಟ್ಟರು!

ನಯೊಮಿಯ ತಾಯಿ ಜಪಾನೀ ಮತ್ತು ತಂದೆ ಹೈಟೀ ಅಮೆರಿಕನ್. ಜಪಾನಿನಲ್ಲಿ 'ಮಿಶ್ರತಳಿ'ಯ ಬಗ್ಗೆ ಅಂತಹ ಒಳ್ಳೆಯ ಅಭಿಪ್ರಾಯವಿಲ್ಲ. ಏಕೆಂದರೆ ಜಪಾನೀ ಸಮಾಜ ಬಹುತೇಕ ಸಂಪ್ರದಾಯಶೀಲ. ಆದರೆ ಇತ್ತೀಚೆಗೆ ಅಲ್ಲಿ ದ್ವಿಜನಾಂಗೀಯ ಕುಟುಂಬಗಳ ಹಲವು ಆಟಗಾರರು ಮಿಂಚುತ್ತಿದ್ದಾರೆ. ಹಾಗಾಗಿ ಸಮಾಜವೂ ಬಿಗಿಯನ್ನು ಸಡಿಲಿಸಿದೆ. ನಯೊಮಿ ಯುಎಸ್ ಓಪನ್ ಪ್ರಶಸ್ತಿ ಗೆದ್ದ ಬಳಿಕ ಜಪಾನೀಯರು ಜಾಲತಾಣಗಳಲ್ಲಿ ವ್ಯಕ್ತಪಡಿಸುತ್ತಿರುವ ಸಂಭ್ರಮವೇ ಇದಕ್ಕೆ ಸಾಕ್ಷಿ. ಟೆನಿಸ್ ಆಟಗಾರರಿಗೆ ಇರಬೇಕಾದ ಸದೃಢ ಮತ್ತು ಎತ್ತರದ ಮೈಕಟ್ಟು ಜಪಾನೀಯರಲ್ಲಿ ಕಡಿಮೆ. ಆದರೆ ದ್ವಿಜನಾಂಗೀಯ ಕುಟುಂಬದ ಮಕ್ಕಳು ದೈಹಿಕವಾಗಿ ಹೆಚ್ಚು ಪ್ರಬಲರಿರುತ್ತಾರೆ. ನಯೊಮಿಗೆ ಅಕ್ಕ ಮೇರಿಯ ಆಟವೇ ಮಾರ್ಗದರ್ಶನ. 'ನನಗೆ 16 ವರ್ಷ ತುಂಬುವವರೆಗೆ ಆಕೆಯ ವಿರುದ್ಧ ಒಂದೇ ಒಂದು ಸೆಟ್ ಕೂಡಾ ಗೆಲ್ಲಲು ಆಗಿಲ್ಲ' ಎಂದು ನಗುತ್ತಾಳೆ ನಯೊಮಿ.

ಪ್ರಶಸ್ತಿಯ ಬೆನ್ನಲ್ಲೇ ಜಾಹೀರಾತು ಲೋಕದಿಂದ ಭರ್ಜರಿ ಆಫರ್‌ಗಳು ಬಂದಿವೆ. ನಿಸ್ಸಾನ್ ಕಂಪೆನಿಯ ಜಾಗತಿಕ ರಾಯಭಾರಿಯಾಗಿ 3 ವರ್ಷದ ಒಪ್ಪಂದಕ್ಕೆ ಸಹಿ ಹಾಕಿದ್ದಾಳೆ. ಅಡಿಡಾಸ್ ಕಂಪೆನಿ ತನ್ನ ಬ್ರ್ಯಾಂಡ್ ಬಟ್ಟೆಗಳ ಪ್ರಚಾರಕ್ಕೆ 14 ದಶಲಕ್ಷ ಡಾಲರ್ ಮೊತ್ತದ ಒಪ್ಪಂದಕ್ಕೆ ಸಹಿ ಹಾಕಿದೆ. ಇದು ಈವರೆಗಿನ ಮಹಿಳಾ ಅಥ್ಲೀಟ್‌ಗಳ ಒಪ್ಪಂದಗಳ ಪೈಕಿ ಅತ್ಯಧಿಕ ಮೊತ್ತ ಎನ್ನಲಾಗಿದೆ. ನಯೊಮಿಯ ಫೈನಲ್ ಆಟದ ದಿನ ಜಪಾನಿನ ಕೇಬಲ್ ಟಿವಿ ವೊವೊವೊ ನೋಡಿದ ವೀಕ್ಷಕರ ಸಂಖ್ಯೆ 9 ಪಟ್ಟು ಹೆಚ್ಚಿತ್ತಂತೆ. ಸಿಟಿಜನ್ ವಾಚ್ ಕಂಪನಿ ನಯೊಮಿಗೆ ದೊಡ್ಡ ಮೊತ್ತದ ಬೋನಸ್ ಹಣ ಪ್ರಕಟಿಸಿದೆ. ಯುಎಸ್ ಓಪನ್ ಮಹಿಳೆಯರ ಫೈನಲ್ ಪಂದ್ಯವನ್ನು ನೇರಪ್ರಸಾರದಲ್ಲಿ ಜಗತ್ತಿನಾದ್ಯಂತ ನೋಡಿದವರ ಸಂಖ್ಯೆ, ಪುರುಷರ ಫೈನಲ್ ಪಂದ್ಯವನ್ನು ನೋಡಿದವರಿಗಿಂತ ಎರಡು ಪಟ್ಟು ಹೆಚ್ಚು ಎಂದು ಇಎಸ್‌ಪಿಎನ್ ಪ್ರಕಟಿಸಿದೆ.

ಈ ಅಕ್ಟೋಬರ್ 16ಕ್ಕೆ 21ನೇ ವರ್ಷಕ್ಕೆ ಕಾಲಿಡುವ ಈ ಕಂದುಸುಂದರಿ ಈಗ ಕ್ರೀಡಾ ಜಗತ್ತಿನ ಹೊಸ ಸಂಚಲನ. ಟಿವಿ ಶೋನಲ್ಲಿ 'ಸೆಲೆಬ್ರಿಟಿಗಳ ಪೈಕಿ ನಿನ್ನ ಕ್ರಷ್ ಯಾರು?' ಎಂಬ ಪ್ರಶ್ನೆಗೆ ನಯೊಮಿ ಸಂಕೋಚದಿಂದ ಉತ್ತರಿಸಿದ್ದು– 'ಆತನ್ಯಾರೋ ಹೆಸರು ಗೊತ್ತಿಲ್ಲ, ಬ್ಲ್ಯಾಕ್ ಪ್ಯಾಂಥರ್ ಸಿನಿಮಾದಲ್ಲಿ ನಟಿಸಿದ್ದಾನೆ ನೋಡಿ..' ಎಂದು. ಆತ ಮೈಕಲ್ ಜೋರ್ಡಾನ್. ಬಿಡುಗಡೆಯಾದ ಮೂರು ತಿಂಗಳಲ್ಲೇ 1.3 ಶತಕೋಟಿ ಡಾಲರ್ ಬಾಕ್ಸಾಫೀಸ್ ಕಲೆಕ್ಷನ್ ನಡೆಸಿ ಹೊಸ ದಾಖಲೆ ಬರೆದ ಚಿತ್ರವದು. ಆತನೀಗ ಹಾಲಿವುಡ್‌ನ ಹೊಸ ಸೂಪರ್‌ಸ್ಟಾರ್.

ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಸೋತ ಸೆರೆನಾ ಮತ್ತು ಗೆದ್ದ ನಯೊಮಿ ಇಬ್ಬರೂ ಕಣ್ಣೀರು ಹಾಕುತ್ತಿದ್ದುದು ಹೃದಯಸ್ಪರ್ಶಿಯಾಗಿತ್ತು. ಕ್ರೀಡೆಯೆಂದರೆ ಹಾಗೆಯೇ– ಗದ್ದುಗೆಯೇರಿದ ಮತ್ತು ಪದಚ್ಯುತಿಗೊಂಡ ಸೂಪರ್‌ಸ್ಟಾರ್ ಇಬ್ಬರೂ ಕಣ್ಣೀರು ಸುರಿಸಲೇಬೇಕು. ಒಂದು ಆನಂದದ್ದು; ಇನ್ನೊಂದು ಸಂತಾಪದ್ದು. 'ನನ್ನ ಅಪ್ಪ ಯಾವತ್ತೂ ನನ್ನ ಆಟ ನೋಡಲು ಕ್ರೀಡಾಂಗಣಕ್ಕೆ ಬರುವುದಿಲ್ಲ. ರಿಯಲೀ ಐ ಮಿಸ್ಡ್ ಹಿಮ್' ಎಂದು ನಯೊಮಿ ಹೇಳಿದಾಗ ಪೆವಿಲಿಯನ್‌ನಲ್ಲಿ ಆಕೆಯ ಅಮ್ಮ ಕಣ್ಣೀರಿಟ್ಟದ್ದು ದುಃಖ ಮತ್ತು ಸಂತೋಷ ಎರಡನ್ನೂ ಪ್ರತಿಬಿಂಬಿಸಿತ್ತು. ■



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65